REGD.NEWS PAPER RNI KARKAN/50347/1988
RNI.Reg.No. KA/BGW/1861/2024-2026
Licenced to post without Pre-payment
Registered Regn.No. PMG/BG/WPP-411/2024-2026
Posted at BANGALORE PSO, MYSORE ROAD,
BANGALORE – 560026

Date of publication 18th of every month
Permitted to post on 20th or 21st

ಕರ್ನಾಟಕ ಆರ್ಯವೈಶ್ಯ ಮಹಾಸಭಾ (ರಿ)

# ವಾರ್ತಾಪತ್ರ

ಕನ್ನಡ ಮಾಸ ಪತ್ರಿಕೆ



ನಂ.16, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560009 ದೂರವಾಣಿ : 080-22206151 – 22206152 – 22206153
Website: www.kavms.com E-mail: kavmss@gmail.com

ಸಂಪಾದಕರು:
ರಾ.ಪ. ರವಿಶಂಕರ್

ಕಾರ್ಯಾಲಯ ಸಮಯ: ವಾರದ ದಿನಗಳಲ್ಲಿ ಬೆಳಿಗ್ಗೆ : 10.30 ರಿಂದ ಸಂಜೆ: 5.30
ಭಾನುವಾರ : ಬೆ. 10.30 ರಿಂದ ಮಧ್ಯಾಹ್ನ : 3.00ರ ವರೆಗೆ

ಸಂಪುಟ : 39 ಮಾರ್ಚ್ 2026 ಬೆಲೆ : 1 ರೂ. ಪುಟಗಳು : 4 ಸಂಚಿಕೆ : 03

## ಅಧ್ಯಕ್ಷರ ನುಡಿ



**ಯುದ್ಧ ಎಂಬುದು ಭೂ ಮಂಡಲಕ್ಕೆ ಹೊಸದೇನೂ ಅಲ್ಲ.** ಮಾನವನ ಹುಟ್ಟಿನಿಂದಲೇ ಅವನ ಬೆನ್ನಿಗೆ ಅಂಟಿಕೊಂಡು ಬಂದಿರುವ **ಯುದ್ಧದ ಗೀಳು, ವ್ಯಾಮೋಹ, ಉನ್ಮಾದ, ಮಾನವ ಕುಲಕ್ಕೆ ಕಂಟಕ ಎಂದು ತಿಳಿದಿದ್ದರೂ,** ನಾಗರೀಕತೆ ಹಾಗೂ ವಿಜ್ಞಾನ ಬೆಳೆದಂತೆ ಯುದ್ಧಕ್ಕೆ ಬಳಸುವ ಶಸ್ತ್ರಾಸ್ತ್ರಗಳು ಸಹ ಭಯಂಕರವಾಗಿದೆ. ಯುದ್ಧ ಎಂದರೇ, ರಕ್ತಪಾತ, ವಿನಾಶ, ನೋವು ಮತ್ತು ದುಃಖಗಳೆಂಬುದು ತಿಳಿದಿದ್ದರೂ ಮಾನವ ಕುಲದ ಇತಿಹಾಸದುದ್ದಕ್ಕೂ ಸಾಲು ಸಾಲು ಯುದ್ದಗಳು ನಡೆದು **ಎಷ್ಟೋ ದೇಶಗಳು ವಿಶ್ವ ಭೂಪಟದಿಂದ ಕಾಣೆಯಾಗಿವೆ.** ಮತ್ತೇಷ್ಟೋ ದೇಶಗಳು ವಿಶ್ವ ಭೂಪಟವನ್ನು ಸೇರಿವೆ, ಹಾಗಂತ ಆ ದೇಶಗಳಲ್ಲಿ ಯುದ್ದದ ನಂತರ ಶಾಂತಿ ನೆಲೆಸಿದೆಯೇ? ಇಲ್ಲ. ಯುದ್ದಾ ನಂತರ ಕರಾಳ ಭೀಕರತೆ ತಣಿಸಲು ಮತ್ತು ದೇಶದ ಪುನರ್ ನಿರ್ಮಾಣಕ್ಕೆ ದಶಕಗಳೇ ಬೇಕು. ರಾಮಾಯಣ, ಮಹಾಭಾರತ, ವೇದಗಳ ಕಾಲಗಳಿಂದಲೂ **ಯುದ್ದದ ವ್ಯಾಮೋಹದ ಬಗ್ಗೆ ತಿಳಿಯುತ್ತಾ ಹೋದರೆ ಅದು ಕೇವಲ ಭೂ ಪ್ರದೇಶದ ವಿಸ್ತರಣೆ, ಧಾರ್ಮಿಕ ಭಿನ್ನಾಭಿಪ್ರಾಯಗಳು, ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು, ಅಧಿಕಾರದಾಸೆ, ನೈಸರ್ಗಿಕ ಸಂಪತ್ತಿನ ಮೇಲಿನ ದುರಾಸೆ ಇತ್ಯಾದಿ** ಇತ್ಯಾದಿಗಳು, ಕಾರಣ ಏನೇ ಇರಲಿ **ಯುದ್ದದ ಪರಿಣಾಮಗಳು ಮಾತ್ರ ಭೀಕರ ಅಲ್ಲವೇ?**

ಇಂದಿನ ಜಾಗತಿಕ ಪ್ರಪಂಚದಲ್ಲಿ ಒಂದೇ ಒಂದು ಯುದ್ದ ಕೇವಲ ಎರಡು ಮೂರು ರಾಷ್ಟ್ರಗಳ ನಡುವೆ ನಡೆದರೂ ಅದರ ಕರಾಳ ಛಾಯೆ ವಿಶ್ವದೆಲ್ಲೆಡೆ ಭಾದಿಸುತ್ತದೆ. ಯುದ್ದ **ನಡೆದ ದೇಶಗಳಲ್ಲಿನ ವ್ಯವಸ್ಥೆಗಳು ಬಹುತೇಕ ನಿರ್ನಾಮವಾಗುತ್ತದೆ. ದೇಶದ ಆರ್ಥಿಕತೆ, ಅಭಿವೃದ್ಧಿ ದಶಕಗಳ ಕಾಲ ಹಿಂದಕ್ಕೆ ಹೋಗುತ್ತದೆ, ಪೀಳಿಗೆಗಳ ಭವಿಷ್ಯ ಅಂಧಕಾರಕ್ಕೆ ತಳ್ಳುತ್ತದೆ, ಯುದ್ದಗಳು ದೇಶಗಳ ಮೂಲ ಅಭಿವೃದ್ಧಿಗೆ ಸವಾಲಾಗಿ ಪರಿಣಮಿಸುತ್ತದೆ.** ಪ್ರಸ್ತುತ ನಡೆಯುತ್ತಿರುವ ಮಧ್ಯ ಪ್ರಾಚ್ಯದ ಯುದ್ದಗಳಿಂದ ಭಾರತ ದೇಶದ ಮೇಲಾಗುತ್ತಿರುವ ಪರಿಣಾಮಗಳನ್ನು ನೋಡಿದರೆ ಅಚ್ಚರಿಯಾಗುವುದಿಲ್ಲವೇ? ಸಾವಿರಾರು ಕಿಲೋಮೀಟರ್‌ಗಳ ದೂರದಲ್ಲಿ ಯುದ್ದ ನಡೆದರೆ ದೇಶದ ಕೋಟಿ ಕೋಟಿ ಹೂಡಿಕೆದಾರರ 24 ಲಕ್ಷ ಕೋಟಿಗಳೂ ಮೀರಿದ ಬೃಹತ್ ಗಾತ್ರದ ಹೂಡಿಕೆ ಮಣ್ಣು ಪಾಲಾಯಿತು, ಸೌದಿ ದೇಶಗಳಲ್ಲಿ ನೆಲೆಸಿದ್ದ ಭಾರತೀಯರು ತವರಿಗೆ ವಾಪಸ್ಸು, ಅವರ ಭವಿಷ್ಯದ ಜೀವನ...? ಪೆಟ್ರೋಲಿಯಂ ಉತ್ಪನ್ನಗಳು, ನೈಸರ್ಗಿಕ ಅನಿಲದ ತೊಂದರೆಗಳು, ಹೈನೋದ್ಯಮ, ಕುಕ್ಕುಟೋದ್ಯಮಕ್ಕೆ ಭಾರಿ ಹೊಡೆತ. ಗಲ್ಫ್ ರಾಷ್ಟ್ರಗಳಿಗೆ ರಫ್ತು ಆಗಬೇಕಿದ್ದ ಮೊಟ್ಟೆ, ಮಾಂಸ, ಹಾಲಿನ ಉತ್ಪನ್ನಗಳ ವ್ಯವಹಾರ ಸಂಪೂರ್ಣ ಬಂದ್.ಹೂವುಗಳು, ಹಣ್ಣುಗಳು, ತರಕಾರಿಗಳನ್ನು ರಫ್ತು ಮಾಡುತ್ತಿದ್ದ ರೈತರು ಕಂಗಾಲು. ರೇಷ್ಮೆ, ಚಿನ್ನ, ಬೆಳ್ಳಿ ವ್ಯಾಪಾರಗಳ ಏರಿಳಿತ ನಾಗರೀಕರ ಗಗನ ಕುಸುಮ, **ಭೂ ಮಂಡಲವನ್ನೇ ನಡುಗಿಸುತ್ತಿರುವ ಇಂತಹ ಯುದ್ದಗಳು ಭೂಮಿಯ ವಿನಾಶಕ್ಕೋ**...? ಅಥವಾ **ಪುನರ್ ನಿರ್ಮಾಣಕ್ಕೋ** ಉತ್ತರಿಸುವವರು ಯಾರು...?

ಅವಶ್ಯವೋ ಅನಿವಾರ್ಯವೋ, ಯಾರ ತಪ್ಪು **ಗ್ರಹಿಕೆಗಳೋ, ಯಾರ ದಾಹವೋ,** ಯುದ್ದ ಆರಂಭವಾಗಿ ಸರಿ ಸುಮಾರು 3 ವಾರಗಳು ಕಳೆದಿವೆ, ಇಲ್ಲಿ ಗೆಲುವು–ಸೋಲುಗಳನ್ನು ಲೆಕ್ಕ ಹಾಕುವುದಕ್ಕಿಂತಲೂ ದೇಶದ **ಆಡಳಿತ ವರ್ಗಗಳಿಗೆ ಇರಬೇಕಾದ ಮಾನವೀಯತೆ, ದೂರದೃಷಿಯಲ್ಲಿನ ಕೊರತೆ, ಅಹಂಕಾರದ ಪರಮಾವಧಿಗಳು ಕೋಟ್ಯಾನು ಕೋಟಿ ನಾಗರೀಕರ ಭವಿಷ್ಯಕ್ಕೆ ಕೊಳ್ಳಿ ಇಟ್ಟಿದೆ ಅಲ್ಲವೇ?** ಯುದ್ದದ ಬೇಗೆಯಲ್ಲಿ ಸುಡುತ್ತಿರುವ ದೇಶಗಳ ಸ್ಥಿತಿ ಒಂದು ಬಗೆಯಾದರೆ, ಭಾರತ ದೇಶದಂತಹ 145 ಕೋಟಿ ಜನ ಸಾಂದ್ರತೆಯ, ನೂರಾರು ಜಾತಿ, ಮತಗಳನ್ನು, ವಿಚಿತ್ರ ಮನೋಭಾವದ ಹಾಗೂ ದೇಶದ ಅಭಿವೃದ್ಧಿಯ ಕಲ್ಪನೆ ಇಲ್ಲದ ರಾಜಕಾರಣಿಗಳನ್ನು ಹೊಂದಿರುವ ನಮ್ಮ ದೇಶದ ನಾಗರೀಕರ ಪಾಡೇನು...?

ಅಮೆರಿಕಾ, ಇಸ್ರೇಲ್, ಇರಾನ್ ಹಾಗೂ ಸೌದಿ ದೇಶಗಳ ನಡುವೆ ಯುದ್ದದ ಭೀಕರತೆ ಮುಗಿಲು ಮುಟ್ಟಿದೆ. ಕೋಟಿ ಕೋಟಿ ನಾಗರೀಕರು ನಿರಾಶ್ರಿತರಾಗಿದ್ದಾರೆ. ಯುದ್ದಕ್ಕಾಗಿ ದೇಶ ದೇಶಗಳ ನಡುವೆ ಆಗಿರುವ ವೆಚ್ಚಗಳು ಲಕ್ಷ ಕೋಟಿಗಳು. ಅದರೆ ಯುದ್ದದಿಂದ ಆಗಿರುವ ಹಾನಿ ಮಾತ್ರ ಲೆಕ್ಕಕ್ಕೆ ಸಿಗುವುದಿಲ್ಲ. **ಸ್ಮಶಾನಕ್ಕಿಂತಲೂ ಘೋರವಾದ ನರಕ ಸೃಷ್ಟಿಯಾಗಿದೆ.** ನಿರ್ನಾಮವಾಗಿ ಪಳೆಯುಳಿಕೆಗಳಂತಿರುವ ದೇಶಗಳ ನವ ನಿರ್ಮಾಣ ಯಾವಾಗ? **ಶ್ರೀಮಂತರು ಬಡವರಾದರು, ಬಡವರು ಭಿಕಾರಿಗಳಾದರು, ಭಿಕಾರಿಗಳು ದರೋಡೆಕಾರರಾಗುವುದರಲ್ಲಿ ಯಾವುದೇ ಸಂಶಯವಿಲ್ಲ,** ಮುಂದಿನ ಮೂರ್‍ನಾಲ್ಕು ತಲೆಮಾರುಗಳು ಇಂದಿನ ತಪ್ಪುಗಳಿಗೆ ಬೆಲೆ ತೆರಬೇಕಾಗಿದೆ, ಇದು ಯುದ್ದದಿಂದ ತತ್ತರಿಸಿರುವ ದೇಶಗಳ ಕತೆಯಾದರೆ, ಯಾವುದೋ ದೇಶದ ಯುದ್ದಕ್ಕೆ ಇನ್ಯಾವುದೋ ದೇಶದಲ್ಲಿ ಆಗುವ ಸಮಸ್ಯೆಗಳಿಗೆ ಪರಿಹಾರ ಏನು...?

ಇದು ಜಾಗತಿಕ ಪ್ರಪಂಚ, ದೇಶ ದೇಶಗಳ ನಡುವೆ ವ್ಯಾಪಾರ, ವಾಣಿಜ್ಯ, ಆರ್ಥಿಕ ಒಪ್ಪಂದಗಳ ರಾಶಿ ರಾಶಿ ಅವಲಂಬನೆ ಇರುತ್ತದೆ. ಆದುದರಿಂದಲೇ ವಿಶ್ವದ ಯಾವುದೊ ಮೂಲೆಯಲ್ಲಿ ಯುದ್ದವಾದರೂ ಅದರ ಪರಿಣಾಮ ಮಾತ್ರ ವಿಶ್ವದ ಬಹುತೇಕ ರಾಷ್ಟ್ರಗಳಿಗೆ ಅಂಟಿಕೊಳ್ಳುತ್ತದೆ. ಇಂತಹ ಸಂದರ್ಭದಲ್ಲಿ ನಮ್ಮನ್ನು ಆಳುವ ಸರ್ಕಾರಗಳ ಜೊತೆಗೆ ದೇಶದ ಸಮಸ್ತ ನಾಗರೀಕರು ಕೈ ಜೋಡಿಸಬೇಕು. **ಉದಾ: ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರ ಕಾಲದಲ್ಲಿ ಅಮೆರಿಕಾ ದೇಶ ನಮಗೆ ಕೊಡುತ್ತಿದ್ದ ಗೋಧಿ ಕಳುಹಿಸಲು ಪಾಕಿಸ್ತಾನದೊಂದಿಗೆ ಯುದ್ಧವನ್ನು ಹಠಾತ್ ನಿಲ್ಲಿಸುವ ಷರತ್ತುಗಳನ್ನು ವಿಧಿಸಿದಾಗ,** ಅಂದಿನ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ಅಮೆರಿಕಾ ದೇಶದ ಷರತ್ತುಗಳನ್ನು ತಿರಸ್ಕರಿಸಿ, ದೇಶದ ಸಾರ್ವಭೌಮತ್ವವನ್ನು ಎತ್ತಿ ಹಿಡಿಯಲು ದೇಶದ ಜನತೆಗೆ ಕರೆ ನೀಡಿ **ವಾರದೆರೆಡು ದಿನ ಒಂದು ಹೊತ್ತಿನ ಊಟವನ್ನು ತ್ಯಜಿಸಲು ಮನವಿ ಮಾಡಿದರು.** ದೇಶದ ಜನತೆ ಸ್ಪಂದಿಸಿ, ಅಮೆರಿಕಾ ದೇಶದ ಗೋಧಿಯನ್ನು ಪಡೆಯದೆಯೇ ಅಂದಿನ 35 ಕೋಟಿ ದೇಶದ ಜನತೆಯ ಸಹಕಾರದಿಂದ **ದೇಶ ಸ್ವಾಭಿಮಾನ ಮೆರೆದದ್ದು ನಮ್ಮದೇ ಇತಿಹಾಸ,** ಅಂದು ಭಾರತ ಬಡ ದೇಶ, ತನ್ನ ದೇಶದ ಜನತೆಯ ಆಹಾರಕ್ಕಾಗಿ ಇತರ ದೇಶಗಳ ಅವಲಂಬನೆಯಲ್ಲಿತ್ತು, ಇಂದು **145 ಕೋಟಿ ಭಾರತೀಯರ ಹೊಟ್ಟೆ ತುಂಬಿಸಲು ಅವಶ್ಯವಿರುವ ಆಹಾರ ಧಾನ್ಯಗಳ ಉತ್ಪಾದಕರು** ಮಾತ್ರವಲ್ಲ, **ದೇಶದ ಸಂಕಷ್ಟ ಸ್ಥಿತಯಲ್ಲಿ ಒಂದು ವರ್ಷಕ್ಕೆ ಬೇಕಿರುವಷ್ಟು ಬೃಹತ್ ದಾಸ್ತಾನು, ಅಷ್ಟೇಅಲ್ಲ ಸುಮಾರು 50 ಕ್ಕೂ ಹೆಚ್ಚು ದೇಶಗಳಿಗೆ ಆಹಾರ ಧಾನ್ಯಗಳನ್ನು ರಫ್ತು** ಮಾಡುತ್ತಿರುವ ಆಹಾರ ಸ್ವಾಲಂಬಿ ದೇಶ ಮತ್ತು ವಿಶ್ವದ 4ನೇ ಅತೀ ದೊಡ್ಡ ಆರ್ಥಿಕ ಶಕ್ತಿ. ಅಂದಿಗಿಂತಲೂ ಇಂದು ನಾವು ಹೆಚ್ಚು ಬಲಾಢ್ಯರಾಗಿದ್ದೇವೆ, ದುರಂತವೆಂದರೇ **ಸ್ವಾಭಿಮಾನ ಮೆರೆಯುವ ಬದಲು ದುರಾಭಿಮಾನಿಗಳಾಗಿದ್ದೇವೆ. ದೇಶ ಮೊದಲು ಎನ್ನುವ ಬದಲು ನಮ್ಮ ಪಕ್ಷ ಮೊದಲು ಎನ್ನುವ ಸಂಕುಚಿತ ಮಟ್ಟಕ್ಕೆ ಇಳಿದಿದ್ದೇವೆ.** ಶಿಕ್ಷಣ ಮತ್ತು ವಿಜ್ಞಾನ ಕ್ಷೇತ್ರಗಳಲ್ಲಿ ದಾಪುಗಾಲು ಹಾಕುತ್ತಾ, ವಿಶ್ವದ ನಾನಾ ದೇಶಗಳಿಗೆ ತಾಂತ್ರಿಕತೆಯ ಸಹಕಾರವನ್ನು, ಮಾನವ ಶಕ್ತಿಯನ್ನು ನೀಡಿರುವ ಮಹಾನ್ ದೇಶ ನಮ್ಮದು. ಆದರೆ ದೇಶದ ರಾಜಕಾರಣಿಗಳು, ಬುದ್ಧಿಜೀವಿಗಳು ಇಂದು ಮದ್ಯ ಪ್ರಾಚ್ಯದ ಯುದ್ಧಗಳಿಂದ ಭಾರತ ದೇಶದ ಮೇಲೆ ಆಗುತ್ತಿರುವ ಪರಿಣಾಮಗಳ ಬಗ್ಗೆ ಆರೋಗ್ಯಕರವಾಗಿ ಚರ್ಚಿಸಿ ದೇಶದ ಆಡಳಿತಾರೂಢ ಸರ್ಕಾರಕ್ಕೆ ಸಹಕರಿಸಿ, ದೇಶದ 145 ಕೋಟಿ ಜನರ ರಕ್ಷಣೆಗೆ ನಿಲ್ಲಬೇಕಾದಂತಹ ವಿರೋಧ ಪಕ್ಷಗಳು ದೇಶದಾದ್ಯಂತ ನಡೆದುಕೊಳ್ಳುತ್ತಿರುವ ರೀತಿ ಎಂತಹ ರಾಷ್ಟ್ರಕರಿಗೂ ಅಸಹ್ಯವೆಂದೆನಿಸದಿರಲು ಸಾಧ್ಯವೇ?

**ದೇಶಕ್ಕೇ ತಿಳಿದ ವಿಷಯ** ನಮ್ಮ ದೇಶ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲಗಳಿಗಾಗಿ ಬಹುತೇಕ ಪರಾವಲಂಬಿ, ಯುದ್ಧ ಕಾಲದಲ್ಲಿ ಅದರಲ್ಲೂ ನಮಗೆ ಅನಿಲವನ್ನು ಪೂರೈಕೆ ಮಾಡುವ ದೇಶಗಳಲ್ಲೇ ಯುದ್ಧ, ಹೀಗಾಗಿ **ನಾವು ಪಡೆದುಕೊಳ್ಳುವ ಸರಕುಗಳಿಗೆ ಬೆಲೆ ಹೆಚ್ಚಿದಂತೆ, ದೇಶದ ಮಾರಾಟ ಬೆಲೆಯಲ್ಲಿಯೂ ಹೆಚ್ಚು** ಆಗೇ ಆಗುತ್ತದೆ. ದೇಶದ ಸಾಮಾನ್ಯ ನಾಗರೀಕರಿಗೂ ತಿಳಿಯುವಂತಹ ವಿಷಯ ಸರ್ಕಾರದ ವಿರೋಧ ಪಕ್ಷಗಳಿಗೆ ತಿಳಿಯದೇ? ಗ್ಯಾಸ್ ಬೆಲೆ ಇಳಿಸಿ ಎಂದು **ಬೀದಿ ಬೀದಿಯಲ್ಲಿ ಸ್ಟ್ರೈಕ್,** ಲೋಕಸಭೆಯ ಕಲಾಪದಲ್ಲಿ **ವಾಣಿಜ್ಯ ಗ್ಯಾಸ್ ಬಗ್ಗೆ ಮಾತನಾಡಿದ ರೀತಿ ದೇಶದ ಸ್ವಾಭಿಮಾನಕ್ಕೆ ಧಕ್ಕೆ ಆಗುವುದಿಲ್ಲವೇ?** ದೇಶದ ಇಂತಹ ಸ್ಥಿತಿಯಲ್ಲಿ ಗಂಭೀರವಾದ, ಗಹನವಾದ ಚರ್ಚೆಗಳು ನಡೆದು ದೇಶವಾಸಿಗಳಿಗೆ ಧೈರ್ಯತುಂಬಬೇಕಾದ ವಿರೋಧಪಕ್ಷಗಳು **ಲೋಕಸಭೆಯ ಮಾನ್ಯ ಸಭಾಧ್ಯಕ್ಷರ ಮೇಲೆ, ದೇಶದ ಚುನಾವಣಾ ಆಯುಕ್ತರ ಮೇಲೆ ಅವಿಶ್ವಾಸ,** ಅದಕ್ಕಾಗಿ ಗಲಾಟೆ, ದಿನಗಟ್ಟಲೆ ಚರ್ಚೆ, ಹೋರಾಟ...!!! ದೇಶದ ಇಂದಿನ ಕಠಿಣ ಪರಿಸ್ಥಿತಿಯಲ್ಲಿ ದೇಶ ರಕ್ಷಣೆಗೆ ನಿಲ್ಲ ಬೇಕಾದ ನಮ್ಮ ರಾಜಕಾರಣಿಗಳು **ನಮ್ಮ ತೆರಿಗೆ ಹಣದಿಂದ ಸಂಬಳ/ಭತ್ಯಗಳನ್ನು ಪಡೆದುಕೊಂಡು ವ್ಯರ್ಥ ಹೋರಾಟದಲ್ಲಿ** ನಿರತರಾಗಿ ಲೋಕಸಭೆ/ವಿಧಾನ ಸಭಾ ಕಲಾಪಗಳ ಹೆಸರಿನಲ್ಲಿ ನಾಗರೀಕ ಸಮುದಾಯ ಪಾವತಿಸಿರುವ **ಸಾವಿರಾರು ಕೋಟಿ ರೂಪಾಯಿಗಳನ್ನು ನುಂಗಿ ನೀರು ಕುಡಿಯುತ್ತಿರುವ** ದೇಶ ಕಂಟಕ ರಾಜಕಾರಣಿಗಳ ಬಗ್ಗೆ ನೀವೇನಂತೀರಿ...? ಇಂತಹವರಿಂದ ದೇಶ ನಿರ್ಮಾಣವೋ ನಿರ್ನಾಮವೋ ನೀವೇ ಯೋಚಿಸಿ.

ಆರ್ ಪಿ ರವಿಶಂಕರ್
ಅಧ್ಯಕ್ಷರು

# ಅಭಿನಂದನೆಗಳು–ಕರ್ನಾಟಕ ಆರ್ಯವೈಶ್ಯ ಯುವಜನ ಮಹಾಸಭೆಯ 23ನೇ ಅಧ್ಯಕ್ಷರಾಗಿ ಶ್ರೀ ಭೀಮರಾಜ್ ಜಿ ವಿ ಆಯ್ಕೆ



50 ವರ್ಷಗಳ ನಿರಂತರ ಸಾರ್ಥಕ ಸೇವೆ ಸಲ್ಲಿಸಿರುವ ಕರ್ನಾಟಕ ಆರ್ಯವೈಶ್ಯ ಯುವಜನ ಮಹಾಸಭೆಯ 2026–2028ರ ಕಾರ್ಯಕಾರಿ ಸಮಿತಿಗೆ ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ನೇತೃತ್ವದಲ್ಲಿ ಚುನಾವಣೆಯ ಪ್ರಕ್ರಿಯೆಗಳು ನಡೆದು ಅಂತಿಮವಾಗಿ 6 ವಿಭಾಗಗಳ ಹಾಗೂ ರಾಜ್ಯಾಧ್ಯಕ್ಷರ ಚುನಾವಣೆಗಳು ಅವಿರೋಧವಾಗಿ ನಡೆದು ಸಂಘಟನಾ ಶಕ್ತಿಯನ್ನು ಪ್ರದರ್ಶಿಸಿತು. 2026–28ನೇ ಸಾಲಿಗೆ **ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿಯ ಶ್ರೀ ಭೀಮರಾಜ್ ಜಿ ವಿ ರವರು ಅಧ್ಯಕ್ಷರಾಗಿ ಆಯ್ಕೆಯಾಗಿರುತ್ತಾರೆ.**

ಈ ಅವಧಿಗೆ ಚುನಾವಣಾ ಅಧಿಕಾರಿಯಾಗಿ ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಸಿ ಇ ಒ ಶ್ರೀಮತಿ ಶುಭಶ್ರೀ ರವರು ಚುನಾವಣಾ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಿ ಅತ್ಯಂತ ಶಿಸ್ತುಬದ್ಧವಾಗಿ ಚುನಾವಣಾ ಪ್ರಕ್ರಿಯೆಗಳನ್ನು ನಡೆಸಿ ಎಲ್ಲರ ವಿಶ್ವಾಸಕ್ಕೆ ಪಾತ್ರರಾಗಿರುತ್ತಾರೆ. ದಿನಾಂಕ 15–3–2026ರ ಭಾನುವಾರ ಶ್ರೀ ಭೀಮರಾಜ್ ಮತ್ತು ತಂಡದವರು ವಿಧ್ಯುಕ್ತವಾಗಿ ಅಧಿಕಾರವನ್ನು ಹಿಂದಿನ ಅಧ್ಯಕ್ಷರಾದ ಶ್ರೀ ಎಸ್ ಸುನಿಲ್ ರವರಿಂದ ಪಡೆದುಕೊಂಡಿರುತ್ತಾರೆ. ಶ್ರೀ ಭೀಮರಾಜ್ ಜಿ ವಿ ರವರ ಅವಧಿಯಲ್ಲಿ ಯುವಜನತೆಯ ಸರ್ವಾಂಗೀಣ ಅಭಿವೃದ್ಧಿಗಾಗಿ ಉತ್ತಮ ಯೋಜನೆಗಳು ಮೂಡಿಬರಲೆಂದು ಮಹಾಸಭೆಯು ಆಶಿಸುತ್ತಾ ನೂತನ ಕಾರ್ಯಕಾರಿ ಸಮಿತಿ ಸದಸ್ಯರೆಲ್ಲರಿಗೂ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತದೆ.

# ಆರ್ಯವೈಶ್ಯ ವಕೀಲರ ಸಭೆ


ದಿನಾಂಕ: 11–03–2026ರಂದು ನಡೆದ ಕರ್ನಾಟಕ ವಕೀಲರ ಪರಿಷತ್ ಚುನಾವಣೆಗಳಲ್ಲಿ ನಮ್ಮ ಸಮಾಜದ ವಕೀಲರಾದ ಶ್ರೀ ಕೆ.ಪಿ.ವಿಶ್ವನಾಥ್‌ರವರು ಸ್ಪರ್ಧಿಸಿದ್ದರು ಹಾಗೂ ಸಮಾಜದ ವಕೀಲರ ಹಾಗೂ ಪರಿಚಯಸ್ಥ ವಕೀಲರ ಸಹಕಾರವನ್ನು ನೀಡಲು ಅಭ್ಯರ್ಥಿ ಶ್ರೀ ಕೆ ಪಿ ವಿಶ್ವನಾಥ್‌ರವರು ಮಹಾಸಭೆಯನ್ನು ಕೋರಿದ್ದರು.



ಬೆಂಗಳೂರು ನಗರದ ಆರ್ಯವೈಶ್ಯ ವಕೀಲರೊಂದಿಗೆ ಮಹಾಸಭಾ ಅಧ್ಯಕ್ಷರು ಮತ್ತು ಶ್ರೀ ಡಿ ಎಸ್ ಅರುಣ್ ಒಐಅ, ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀ ಕೆ ವಿ ರಾಮಪ್ರಸಾದ್.

ಈ ಹಿನ್ನೆಲೆಯಲ್ಲಿ ಕಳೆದ ಆರು ತಿಂಗಳುಗಳಿಂದ ಮಹಾಸಭೆಯ ಅಧ್ಯಕ್ಷರು ಭಾಗವಹಿಸಿದ ಎಲ್ಲಾ ಕಾರ್ಯಕ್ರಮಗಳಲ್ಲಿ ನಮ್ಮ ಸಮಾಜದ ಅಭ್ಯರ್ಥಿಗೆ ಸಹಕಾರ ಕೋರಿದ್ದೆ ಅಲ್ಲದೆ, ದಿನಾಂಕ:05–03–2026 ರಂದು ಬೆಂಗಳೂರು ನಗರದಲ್ಲಿನ ಕೆಲವು ವಕೀಲರನ್ನು ಮಹಾಸಭೆ ಕಛೇರಿಗೆ ಆಹ್ವಾನಿಸಿ ದಿನಾಂಕ:11–03–2026ರಂದು ನಡೆಯಲಿರುವ ಕರ್ನಾಟಕ ವಕೀಲರ ಪರಿಷತ್‌ನ ಚುನಾವಣೆಗಳಲ್ಲಿ ಶ್ರೀ ಕೆ ಪಿ ವಿಶ್ವನಾಥ್‌ರವರ ಗೆಲುವಿಗೆ ಸಹಕಾರವನ್ನು ಕೋರಿದರು.

## ಶ್ರದ್ಧಾಂಜಲಿ



ಎಸ್.ಜಿ ರಮೇಶ್ ಗುಪ್ತಾ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಗ್ರಾಮಾಂತರ ನಗರ ಮಾಗಡಿ ಪ್ರಸ್ತುತ ರಾಮನಗರ ಜಿಲ್ಲೆಯಲ್ಲಿದೆ. ಮಾಗಡಿ ನಗರದಲ್ಲಿ **ಸಮಾಜದ ಸಂಘಟನೆಯ ಪ್ರೇರಕ ಶಕ್ತಿ ಪ್ರಸ್ತುತ ಆರ್ಯವೈಶ್ಯ ಮಂಡಳಿ ಅಧ್ಯಕ್ಷರು** ಮತ್ತು ಶ್ರೀ **ವಾಸವಿ ವಿದ್ಯಾಪೀಠ ಶಾಲೆಯ** ಸಂಸ್ಥಾಪಕರಲ್ಲಿ ಒಬ್ಬರಾಗಿ ಕಳೆದ **25 ವರ್ಷಗಳಿಂದ** ಶಾಲೆಯ ಸರ್ವಾಂಗೀಣ ಅಭಿವೃದ್ಧಿಗಾಗಿ ಕಾಯಾವಾಚ ಮನಸಾ, ತನು ಮನ ಧನಗಳ ಸೇವೆಯನ್ನು ಅವಿರತವಾಗಿ ನೀಡಿ ನಮ್ಮ ವಾಸವಿ ಶಾಲೆ **ಜಿಲ್ಲೆಯ ಪ್ರಮುಖ ಪ್ರತಿಷ್ಠಿತ ಶಾಲೆಗಳಲ್ಲಿ** ಒಂದಾಗಿ ಬೆಳೆದು ಬೆಳಗಲು ಶ್ರಮಿಸಿದ ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಮಾಜಿ ನಿರ್ದೇಶಕರೂ ಆದ ಸಮಾಜದ ಸಂಘಟನಾ ಶಕ್ತಿ ಶ್ರೀ ಎಸ್ ಜಿ ರಮೇಶ್ ಗುಪ್ತಾ ದಿನಾಂಕ:08–03–2026ರ ಭಾನುವಾರ ಇಹಲೋಕದ ಸೇವೆಗೆ ಇತಿಶ್ರೀ ಹಾಡಿ ಪರಮಾತ್ಮನ ಸೇವೆಗಾಗಿ ಭಗವಂತನ ಪಾದಪದ್ಮಗಳಲ್ಲಿ ಲೀನರಾದರು.

ಮಾಗಡಿಯ ಪ್ರತಿಯೊಂದು ಸಂಘ ಸಂಸ್ಥೆಗಳ ಅಭಿವೃದ್ಧಿಯಲ್ಲಿ ಸಹಕರಿಸಿದ್ದ, ಕರ್ನಾಟಕ ಆರ್ಯವೈಶ್ಯ ಯುವಜನ ಮಹಾಸಭೆ ಮತ್ತು ಕರ್ನಾಟಕ ಆರ್ಯವೈಶ್ಯ ಮಹಾಸಭೆಗಳಲ್ಲಿ ಸಕ್ರಿಯ ಕಾರ್ಯಕರ್ತನಾಗಿ ಸೇವೆ ಸಲ್ಲಿಸಿದ್ದ ಕ್ರಿಯಾಶೀಲ ವ್ಯಕ್ತಿತ್ವದ ಶ್ರೀ ಎಸ್.ಜಿ.ರಮೇಶ್ ಗುಪ್ತಾರವರು ಭೌತಿಕವಾಗಿ ನಮ್ಮ ಜೊತೆ ಇಲ್ಲ, ಆದರೆ ಅವರು ಸಮಾಜಕ್ಕೆ ನೀಡಿರುವ ಸೇವೆ ಶಾಶ್ವತ. **ಅವರು ಬೆಳೆದು ಬಂದ ಹಾಗೂ ನಡೆದು ಬಂದ ದಾರಿ ಮುಂದಿನ ಪೀಳಿಗೆಗೆ ಆದರ್ಶ** ಶ್ರೀ ಎಸ್.ಜಿ.ರಮೇಶ್‌ರವರ ಸಾವು ಸಮಾಜಕ್ಕೆ ತುಂಬಲಾರದ ನಷ್ಟ. ಇವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಜಗನ್ಮಾತೆ ಶ್ರೀ ವಾಸವಿ ದೇವಿಯು ಕುಟುಂಬದ ಸದಸ್ಯರಿಗೆ, ಆಪ್ತರಿಗೆ ನೀಡಲೆಂದು ಪ್ರಾರ್ಥಿಸಿ, ಕರ್ನಾಟಕ ಆರ್ಯವೈಶ್ಯ ಮಹಾಸಭೆ ಸಂತಾಪವನ್ನು ವ್ಯಕ್ತಪಡಿಸುತ್ತದೆ.

**ಕಷ್ಟದಲ್ಲಿ ಇರುವವರನ್ನು ಕಂಡು ನಮ್ಮ ಮನಸ್ಸು ಮರುಗಿದರೆ ನಮ್ಮ ಹೆತ್ತವರು ಹೇಳುತ್ತಾರೆ... ಜನ್ಮ ಸಾರ್ಥಕ ಎಂದು. ಕಷ್ಟದಲ್ಲಿ ಇರುವವರನ್ನು ಗುರುತಿಸಿ ಸಹಾಯ ಮಾಡಲು ಮುಂದಾದರೆ ಭಗವಂತ ಹೇಳುತ್ತಾನೆ ಸೃಷ್ಟಿ ಸಾರ್ಥಕ ಎಂದು. ಈ ಬಂಗಾರದಂತಹ ನುಡಿ ಮುತ್ತುಗಳು ನಮ್ಮ ರಮೇಶಣ್ಣನ ಆತ್ಮಕ್ಕೆ ಅರ್ಪಣೆ.**

# ಪರಾಭವ ಸಂವತ್ಸರದ ವಾಸವಿ ಪಂಚಾಂಗ ಲೋಕಾರ್ಪಣೆ



ಬೆಂಗಳೂರು ಆರ್ಯವೈಶ್ಯ ಮಂಡಳಿಗಳ ಒಕ್ಕೂಟವು ಪ್ರತಿ ವರ್ಷದಂತೆ, ನೂತನ ವರ್ಷ **ಪರಾಭವ ನಾಮ ಸಂವತ್ಸರದ ವಾಸವಿ ಪಂಚಾಂಗ**ವನ್ನು ಅರ್ಥಪೂರ್ಣವಾಗಿ ಲೋಕಾರ್ಪಣೆಗೊಳಿಸಿತು. ಸಹಕಾರನಗರದ ಆರ್ಯವೈಶ್ಯ ಮಿತ್ರವೃಂದ ಟ್ರಸ್ಟ್ ಸಹಕಾರದೊಂದಿಗೆ ದಿನಾಂಕ 9–3–2026ರಂದು ಅಲ್ಲಿನ ಕನ್ಯಕಾಪರಮೇಶ್ವರಿ ದೇವಸ್ಥಾನದ ಆವರಣದಲ್ಲಿ ನಡೆಯಿತು. ಶ್ರೀ ಆರ್ ಪಿ ರವಿಶಂಕರ್‌ರವರು ಸಮಾರಂಭದ ಉದ್ಘಾಟನೆ ನೆರವೇರಿಸಿ, ಪಂಚಾಂಗದ ಬಳಕೆಯ ಮಹತ್ವ ತಿಳಿಸಿದರು. ವಾಸವಿ ಪಂಚಾಂಗ ಲೋಕಾರ್ಪಣೆ ಮಾಡಿದ ವಾಸವಿ ಪೀಠದ ಪೀಠಾಧಿಪತಿಗಳಾದ ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಸರಸ್ವತಿಯವರು ಪಂಚಾಂಗದ ಮೂಲಕ ನಾವು ಭಗವಂತನಿಗೆ ಕನೆಕ್ಟ್ ಆಗುತ್ತೇವೆಂದರು. ಪಂಚಾಂಗ ಕರ್ತೃ ಶ್ರೀ ಸತ್ಯನಾರಾಯಣ ಶರ್ಮರವರು ಪಂಚಾಂಗದಲ್ಲಿ ಅಡಕವಾಗಿರುವ ಅಂಶಗಳು, ವಿಷಯಗಳು, ಲೆಕ್ಕಾಚಾರಗಳನ್ನು ಹೇಗೆ ನೋಡಬೇಕು ಎನ್ನುವುದನ್ನು ಮನದಟ್ಟು ಮಾಡಿದರು. ಒಕ್ಕೂಟದ ಅಧ್ಯಕ್ಷರಾದ ಶ್ರೀ ನಾಗಮಹೇಶ್‌ರವರು ವಾಸವಿ ಪಂಚಾಂಗವು ಆರ್ಯವೈಶ್ಯರ ಮನೆ ಮನೆಗಳಲ್ಲಿ ಉಪಯೋಗವಾಗುವಂತಾಗಬೇಕೆಂದರು.

ಮಹಿಳೆಯರ ಕೋಲಾಟ, ಸಾಂಸ್ಕೃತಿಕ ಕಾರ್ಯಕ್ರಮಗಳು, ಭಕ್ತಿ ಭಾವದಿಂದ ವಾಸವಿ ಮಾತೆಯ ಮೆರವಣಿಗೆ ಅರ್ಥಪೂರ್ಣ ಪಂಚಾಂಗದ ಲೋಕಾರ್ಪಣೆ ಬೆಂಗಳೂರು ಉತ್ತರ ಭಾಗದ ಆರ್ಯವೈಶ್ಯ ಬಾಂಧವರಲ್ಲಿ ಸಂಭ್ರಮ, ಸಡಗರವು ಪರಾಕಾಷ್ಠೆ ತಲುಪಿತ್ತು. ಸಹಕಾರನಗರದ ಮಿತ್ರವೃಂದದವರ ಸಹಕಾರ ಸಮಾರಂಭದ ಯಶಸ್ಸಿಗೆ ಇಂಬು ನೀಡಿತ್ತು. ಅಲ್ಲದೆ ಚಿರಕಾಲ ಎಲ್ಲರ ಮನಸ್ಸಿನಲ್ಲಿ ಉಳಿಯುವಂತಹ ಕ್ಷಣಗಳು ಇದಾಗಿತ್ತು. ಅದರೊಂದಿಗೆ ಸಂಜೆಯ ಚಾಟ್ಸ್, ರಾತ್ರಿಯ ರುಚಿಕರ ಭೋಜನ ಸಹ ಎಲ್ಲರ ಪ್ರಶಂಸೆಗೆ ಪಾತ್ರವಾಗಿತ್ತು. ಒಕ್ಕೂಟದ ಮತ್ತೊಂದು ಮೈಲಿಗಲ್ಲಾಗಿ ವಾಸವಿ ಪಂಚಾಂಗ ಲೋಕಾರ್ಪಣೆಯಾಯಿತು.

# ಲ್ಯಾಪ್‌ಟಾಪ್ ಮತ್ತು ಶ್ರೀ ವಾಸವಿ ವಸ್ತ್ರ ವಿತರಣೆ


**ಸಮಾಜವನ್ನು ಮುನ್ನಡೆಸಲು ಏನು ಮಾಡಬೇಕು ಎನ್ನುವ ಪ್ರಶ್ನೆಗೆ ಒಬ್ಬ ಜ್ಞಾನಿ ಹೇಳಿದ ಅನುಭವದ ಮಾತು ಕಾಲು ಎಳೆಯುವುದು ಬಿಟ್ಟು ಕೈಯನ್ನು ಎಳೆಯ ಬೇಕು.** ಎಷ್ಟು ಸುಂದರವಾದ ಮತ್ತು ಅರ್ಥಪೂರ್ಣವಾದ ಸಾಲುಗಳಲ್ಲವೆ!!! ಇಂತಹ ಜ್ಞಾನಿಗಳ ಹೊನ್ನುಡಿಗಳಿಂದ ಪ್ರೇರಿತರಾಗಿ, **ಶೋಷಣೆಗೆ ಒಳಗಾದವರಿಗೆ ಪೋಷಣೆ ನೀಡುವ ಮೂಲಕ ಸಮಾಜದ ಸ್ವಾಸ್ಥ್ಯವನ್ನು ಕಾಪಾಡಬೇಕೆಂಬ** ಹಂಬಲದಿಂದ ಕಾರ್ಯನಿರ್ವಹಿಸುತ್ತಿರುವ ಮಹಾಸಭೆ ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಹತ್ತು ಹಲವು ಸೇವಾ ಕಾರ್ಯಕ್ರಮಗಳನ್ನು ಅವಶ್ಯಕತೆಗನುಸಾರವಾಗಿ ನೀಡುತ್ತಾ ಬಂದಿದೆ. ಅಂತಹ ವೈಶಿಷ್ಟ್ಯ ಪೂರ್ಣ ಯೋಜನೆಗಳಲ್ಲಿ ವಿದ್ಯಾರ್ಥಿಮಿತ್ರ ಯೋಜನೆ ದೇಶದ ಬೆನ್ನೆಲುಬಾಗಿರುವ **ಯುವಶಕ್ತಿಯ ಭವ್ಯ ಭವಿಷ್ಯದ ಬೆಳಕು ಎಂದರೇ ಅತಿಶಯೋಕ್ತಿ ಆಗಲಾರದು.**

ವೃತ್ತಿಪರ ಶಿಕ್ಷಣ ಅಂದರೆ ಡಿಪ್ಲೋಮ, ಇಂಜಿನಿಯರಿಂಗ್, ವೈದ್ಯಕೀಯ, ಸಿ.ಎ, ಎಂಬಿಎ, ಎಂಸಿಎ, ಇತ್ಯಾದಿ ಇತ್ಯಾದಿ ಕೋರ್ಸುಗಳಲ್ಲಿ ಓದುತ್ತಿರುವ ಆರ್ಥಿಕವಾಗಿ ಹಿಂದುಳಿದಿರುವ ಪ್ರತಿಭಾವಂತ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ಕನಸಿಗೆ ಕೈಜೋಡಿಸಿ ಸಹಕರಿಸುವ ವೈಶಿಷ್ಯಪೂರ್ಣ ಯೋಜನೆ ವಿದ್ಯಾರ್ಥಿಮಿತ್ರ ಎರಡು ರೀತಿಯಲ್ಲಿ **ವಿದ್ಯಾರ್ಥಿ ಸ್ನೇಹಿಯಾಗಿ ಸಾವಿರ ಸಾವಿರ ವಿದ್ಯಾರ್ಥಿಗಳಲ್ಲಿ ಆತ್ಮಸ್ಥೈರ್ಯ ತುಂಬಿ ಸ್ವಾಭಿಮಾನದಿಂದ ಶಿಕ್ಷಣ ಮುಂದುವರೆಸುವ ಶಕ್ತಿಯಾಗಿದೆ.**



ವಿದ್ಯಾರ್ಥಿ ಮಿತ್ರ ಉಚಿತ ಲ್ಯಾಪ್ಟಾಪ್ ಯೋಜನೆಗೆ ಆಯ್ಕೆಯಾದ ವಿದ್ಯಾರ್ಥಿಗಳೊಂದಿಗೆ ಮಹಾ ಸಭೆಯ ಪದಾಧಿಕಾರಿಗಳು

**ವಿದ್ಯಾರ್ಥಿ ಮಿತ್ರ ಬಡ್ಡಿ ರಹಿತ ಆಧಾರ ರಹಿತ ಸಾಲ ಯೋಜನೆ:** ಯಾರ ಪ್ರಭಾವವಿಲ್ಲದೆ, ಯಾವುದೇ ಆಸ್ತಿಯ ಅಡಮಾನ/ಆಧಾರವಿಲ್ಲದೆ, ಬಡ್ಡಿಯೂ ಇಲ್ಲದೆ, ಶಿಕ್ಷಣ ಮುಗಿಸಿದ ನಂತರ 36 ಮಾಸಿಕ ಕಂತುಗಳಲ್ಲಿ ಕೇವಲ ಪಡೆದುಕೊಂಡ ಸಾಲದ ಮೊತ್ತವನ್ನು ಮಾತ್ರ ಪಾವತಿಮಾಡುವ ವಿಶೇಷಯೋಜನೆ. ಸ್ವಂತ ಪ್ರತಿಭೆಯಿಂದ ಸರ್ಕಾರಿ ಕೋಟಾದಡಿ ಕಾಲೇಜಿನ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ ಪ್ರತೀ ವರ್ಷ (ಕೋರ್ಸಿನ ಅವಧಿ ಪೂರ್ಣ) ಗರಿಷ್ಟ ರೂ. 1,00,000–00ಗಳ ವರೆಗಿನ ಸಾಲ ಸೌಲಭ್ಯ.





ಶ್ರೀ ವಾಸವಿ ವಸ್ತ್ರಗಳಿಗೆ ವಿಶೇಷ ಪೂಜೆ

ಇದುವರೆವಿಗೂ ಸುಮಾರು 1500ಕ್ಕೂ ಮೀರಿದ ವಿದ್ಯಾರ್ಥಿಗಳಿಗೆ 13 ಕೋಟಿಗೂ ಮೀರಿದ ಬೃಹತ್ ಮೊತ್ತದ ಆರ್ಥಿಕ ಸಹಕಾರ ನೀಡಲಾಗಿದೆ.

**ವಿದ್ಯಾರ್ಥಿ ಮಿತ್ರ ಉಚಿತ ಲ್ಯಾಪ್ಟಾಪ್ ಯೋಜನೆ:** ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ನೀಡುವ ವಿಶಿಷ್ಟವಾದ ಹಾಗೂ ಔಚಿತ್ಯಪೂರ್ಣ ಯೋಜನೆ. ಈ ಯೋಜನೆಯಲ್ಲಿ ಪ್ರತೀ ವರ್ಷವೂ ಆಯ್ಕೆ ಆದ 200 ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ನೀಡುತ್ತಾ ಬಂದಿದೆ. 8 ವರ್ಷಗಳಲ್ಲಿ ಸುಮಾರು **ಆರೂವರೆ ಕೋಟಿ ರೂಪಾಯಿ ವೆಚ್ಚದಲ್ಲಿ 1572 ಲ್ಯಾಪ್‌ಟಾಪ್‌ಗಳನ್ನು ವಿದ್ಯಾರ್ಥಿಗಳಿಗೆ ನೀಡಿ** ಅವರ ಶಿಕ್ಷಣದ ಅಶೋತ್ತರಗಳ ಈಡೇರಿಕೆಗೆ ಸಹಾಯ ಹಸ್ತ ನೀಡುತ್ತಾ ಬಂದಿದೆ.

ದಿನಾಂಕ:01–03–2026ರಂದು ಬೆಂಗಳೂರು ಶೇಷಾದ್ರಿ ರಸ್ತೆಯಲ್ಲಿರುವ ಜೈನ್ ಕಾಲೇಜು ಸಭಾಂಗಣದಲ್ಲಿ **8ನೇ ವರ್ಷದ ಲ್ಯಾಪ್‌ಟಾಪ್ ವಿತರಣಾ ಕಾರ್ಯಕ್ರಮ** ನಡೆದು ಬೆಂಗಳೂರು ನಗರದ ಕಾಲೇಜುಗಳಲ್ಲಿ ಓದುತ್ತಿರುವ 102 ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ವಿತರಿಸಿದ್ದು ಉಳಿದ 70 ವಿದ್ಯಾರ್ಥಿಗಳಿಗೆ ಅವರುಗಳು ನೆಲೆಸಿರುವ ಜಿಲ್ಲೆಗಳಲ್ಲಿಯೇ ವಿತರಣೆ ಮಾಡಲಾಯಿತು. ಇದೇ ಸಂದರ್ಭದಲ್ಲಿ **ಹಿಂದೂ ನೂತನ ಸಂವತ್ಸರ ಯುಗಾದಿ ಅಂಗವಾಗಿ ಅಧ್ಯಾತ್ಮಿಕ ಕ್ಷೇತ್ರದ ಸಂಘಟನಾ ಶಕ್ತಿಯನ್ನು ಅನಾವರಣಗೊಳಿಸುವ ರಾಜ್ಯದ 307** ಶ್ರೀ **ವಾಸವಿ ದೇವಾಲಯಗಳಲ್ಲಿ ಶ್ರೀಮಾತೆಗೆ ಏಕರೂಪ ವಸ್ತ್ರಧಾರಣೆಯ ಯೋಜನೆಯಡಿ ರೇಷ್ಮೆ ಸೀರೆಗಳನ್ನು** ವಿತರಿಸುವ 3ನೇ ವರ್ಷದ ಶ್ರೀ **ವಾಸವಿ ವಸ್ತ್ರ ವಿತರಣೆಗೆ** ಚಾಲನೆ ನೀಡಲಾಯಿತು. 307 ದೇವಾಲಯಗಳಲ್ಲಿ ವಿರಾಜಮಾನಳಾಗಿ ಲೋಕ ಕಲ್ಯಾಣಕ್ಕಾಗಿ ಮಾನವ ಕೋಟಿಯನ್ನು ಅನುಗ್ರಹಿಸುತ್ತಿರುವ ಶ್ರೀ ವಾಸವಿ ಮಾತೆಯ ರೇಷ್ಮೆ ವಸ್ತ್ರಗಳ ಪೂರ್ಣ ಸೇವಾಕರ್ತರಾದ **ಖ್ಯಾತ ಲೆಕ್ಕ ಪರಿಶೋಧಕರು ಹಾಗೂ ರಿಯಲ್ ಎಸ್ಟೇಟ್ ಉದ್ಯಮಿ ಶ್ರೀಮತಿ/ಶ್ರೀ ಹನುಮೇಶ ದಂಪತಿಗಳು** ವಿತರಣಾ ರೇಷ್ಮೆ ವಸ್ತ್ರಗಳಿಗೆ ಆಗಮಿಕರೊಂದಿಗೆ ಶ್ರದ್ಧಾ ಭಕ್ತಿಗಳಿಂದ ಪೂಜೆ ಸಲ್ಲಿಸಿ ರಾಜ್ಯಾದ್ಯಂತ ಇರುವ ಶ್ರೀ ವಾಸವಿ ದೇವಾಲಯಗಳಿಗೆ ವಸ್ತ್ರಗಳನ್ನು ಸೇರಿಸಲು ಮಹಾಸಭೆ ಕಾರ್ಯಕರ್ತರಿಗೆ ರೇಷ್ಮೆ ಸೀರೆಗಳನ್ನು ಹಸ್ತಾಂತರ ಮಾಡಿದರು.



ಶ್ರೀ ಹನುಮೇಶ್ ದಂಪತಿಗಳಿಂದ ಶ್ರೀ ವಾಸವಿ ವಸ್ತ್ರ ವಿತರಣೆ




ಶ್ರೀ ವಾಸವಿ ವಸ್ತ್ರಗಳ ಪೂರ್ಣ ಸೇವಾಕರ್ತರಾದ ಶ್ರೀ ಹನುಮೇಶ್ ದಂಪತಿಗಳಿಗೆ ಗೌರವ ಮಹಾಸಭೆಯ ಪದಾಧಿಕಾರಿಗಳಿಂದ

ಲ್ಯಾಪ್‌ಟಾಪ್ ಹಾಗೂ ರೇಷ್ಮೆ ವಸ್ತ್ರ ವಿತರಣೆಗಾಗಿ ನಡೆದ ಸರಳ ಸಮಾರಂಭದ ಮುಖ್ಯ ಆಹ್ವಾನಿರಾಗಿ ಖ್ಯಾತ ಕೈಗಾರಿಕೋದ್ಯಮಿ ಭಾಗ್ಯಲಕ್ಷ್ಮೀ ಇಂಡಸ್ಟ್ರಿಸ್‌ನ ವ್ಯವಸ್ಥಾಪಕ ನಿರ್ದೇಶಕರಾದ **ಶ್ರೀ ಬಿ ಎ ಶ್ರೀನಿವಾಸ್**, ಕೆವಿಸಿ ಟ್ರಸ್ಟ್ ಅಧ್ಯಕ್ಷರಾದ ಶ್ರೀ ಐ.ಎಸ್.ಪ್ರಸಾದ್, ಕರ್ನಾಟಕ ಆರ್ಯವೈಶ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ **ಶ್ರೀ ಕೆ ವಿ ರಾಮ್ ಪ್ರಸಾದ್** ಮತ್ತು ಪ್ರತಿಷ್ಠಿತ ಎಪಿಎಸ್ ವಿದ್ಯಾ ಸಂಸ್ಥೆಯ ಅಧ್ಯಕ್ಷರಾದ **ಶ್ರೀ ಎ ಎಸ್ ವಿಷ್ಣುಭರತ್**ರವರು ಆಗಮಿಸಿದ್ದು ಮಹಾಸಭೆಯ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತ ಪಡಿಸಿ, ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಕರೆನೀಡಿ, ಇಂದು ಇಂದು ನೀವು ಪಡೆದುಕೊಳ್ಳುತ್ತಿರುವ ಸಹಾಯ ಮರೆಯದೆ, ನೀವು ಬೆಳೆದ ನಂತರ ನೀವೂ ಇತರರಿಗೆ ಸಹಕಾರ ನೀಡುವ ಮನಃಸ್ಥಿತಿಯನ್ನು ಬೆಳೆಸಿಕೊಳ್ಳಬೇಕೆಂದು ಮಾರ್ಗದರ್ಶನ ನೀಡಿದರು. ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಎ.ಆರ್. ರವಿಕುಮಾರ್‌ರವರು ಕಾರ್ಯಕ್ರಮ ನಿರೂಪಣೆ ಮಾಡಿದರು.

## ಮಹಿಳಾ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ



2026–27ನೇ ಶೈಕ್ಷಣಿಕ ವರ್ಷದಿಂದ ಬೆಂಗಳೂರು ಗಾಂಧಿನಗರದಲ್ಲಿರುವ ಮಹಾಸಭೆ ಕಟ್ಟಡದಲ್ಲಿ ವಿದ್ಯಾರ್ಥಿನಿಯರಿಗಾಗಿ ಸುಸಜ್ಜಿತವಾದ ಹಾಸ್ಟೆಲ್ ಅನ್ನು ಪ್ರಾರಂಭಿಸಲಾಗುತ್ತದೆ. ಹೆಚ್ಚಿನ ಮಾಹಿತಿಗಳಿಗೆ ಮುಂದಿನ ಸಂಚಿಕೆಯನ್ನು ನಿರೀಕ್ಷಿಸಿ



# ವಾಸವಿ ಕ್ರೆಡಿಟ್ ಕೋ - ಆಪರೇಟಿವ್ ಸೊಸೈಟಿ ನಿಯಮಿತ

ಪ್ರಧಾನ ಕಛೇರಿ : ನಂ. 108/1, ಶ್ರೀಚಕ್ರ, ಈಸ್ಟ್ ಪಾರ್ಕ್‌ರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003

ದೂರವಾಣಿ : 23318815, 23447014 Email: vasavi_coop@rediffmail.com

ಸಂಜಯನಗರ: 23419780, ಮೂಡಲಪಾಳ್ಯ: 23111283, ನೆಲಮಂಗಲ : 27726666, ಗಾಂಧೀಬಜಾರ್ : 26623110

ಸೌಲಭ್ಯಗಳು : ವೈಯುಕ್ತಿಕ ಸಾಲ * ವ್ಯಾಪಾರ ಸಾಲ * ವಾಹನ ಸಾಲ * ಗೃಹೋಪಯೋಗಿ ಸಾಲ * ಮನೆಕಟ್ಟಲು, ಕೊಳ್ಳಲು * ದುರಸ್ತಿಗಾಗಿ

## ಯುಗಾದಿ ಠೇವಣಿಗಳು

ದಿನಾಂಕ 27-03-2026ರ ವರವಿಗೆ ಮಾತ್ರ

ಹಿರಿಯ ನಾಗರೀಕರಿಗೆ ಶೇ. 10*

ಭಾನುವಾರವೂ ಸೇವೆ ಲಭ್ಯ

ಸಾಮಾನ್ಯ ಶೇ. 9.5*

ಆಡಳಿತ ಮಂಡಳಿ ರಾ ಪ ರವಿಶಂಕರ್ ಅಧ್ಯಕ್ಷರು

ಸಂಜೀವಮೂರ್ತಿ ಪಿ ಆರ್ ಉಪಾಧ್ಯಕ್ಷರು

ನಿರ್ದೇಶಕರುಗಳು: ಆದಿನಾರಾಯಣ ಪ್ರಸಾದ್ ಪಿ ಎಸ್, ಶ್ರೀನಾಥ್ ಎನ್, ರಾಜೇಶ್ ಆರ್ ಎಸ್, ಶ್ರೀಮತಿ ಉಮಾ ಸಾಯಿರಾಂ
ಮಂಜುನಾಥ್ ಎಸ್, ಚೈತನ್ಯ ಗುಪ್ತ ಕೆ ಎನ್, ಅರವಿಂದ್ ಬಿ ಜಿ, ನಾಗಶರಣ್ ಕೆ ವಿ, ಶ್ರೀಮತಿ ಶಶಿಕಲಾ ಕೆ ಎನ್




ವಿಜೇತ ತಂಡ ಗೋಲ್ಡನ್ ಟೈಟನ್ಸ್ ಹಾಗೂ ಪವರ್ ಸ್ಮ್ಯಾಶರ್ ಆಟಗಾರರು ಪ್ರಶಸ್ತಿಗಳೊಂದಿಗೆ

**ಬೆಂ**ಗಳೂರಿನ ಮಲ್ಲೇಶ್ವರ ಬಡಾವಣೆಯ **ವಾಸವಿ ಯುವಜನ ಸಂಘದ** ಆಶ್ರಯದಲ್ಲಿ **12ನೇ ವರ್ಷದ ಕರ್ನಾಟಕ ವಾಸವಿ ಸ್ಪೋರ್ಟ್ಸ್ ಲೀಗ್** ಹೆಸರಿನಲ್ಲಿ ಮಾರ್ಚ್ ತಿಂಗಳ ದಿನಾಂಕ 7 ಮತ್ತು 8ರಂದು **ಬಾಕ್ಸ್ ಕ್ರಿಕೆಟ್ ಟೂರ್ನಮೆಂಟ್** ಅನ್ನು ಆಯೋಜಿಸಲಾಗಿತ್ತು. ಪ್ರಪ್ರಥಮ ಬಾರಿಗೆ ನಾಲ್ಕು ಮಹಿಳಾ ತಂಡಗಳು ಭಾಗವಹಿಸಿದ್ದು ಅತ್ಯಂತ ವಿಶೇಷವಾಗಿತ್ತು ಒಟ್ಟು 32 ತಂಡಗಳು ಪಂದ್ಯಗಳಲ್ಲಿ ಭಾಗವಹಿಸಿದ್ದು ಅಂತಿಮವಾಗಿ **ಬೆಂಗಳೂರಿನ ಗೋಲ್ಡನ್ ಟೈಟನ್ಸ್** ತಂಡವು 2026ರ **ವಿಪಿಎಲ್ ಬಹುಮಾನ ಪಡೆದ** ವಿಜೇತ ತಂಡಕ್ಕೆ ನಗದು ರೂ.40000/- ಪುರಸ್ಕಾರ ಮತ್ತು ಟ್ರೋಫಿಯನ್ನು ದ್ವಿತೀಯ ಸ್ಥಾನ ವಾಸವಿ ಅಗರ್ಥಸ್ ತಂಡಕ್ಕೆ ನಗದು ರೂ.20000/- ಪುರಸ್ಕಾರ ಮತ್ತು ಟ್ರೋಫಿಯನ್ನು ನೀಡಲಾಯಿತು. **ಮಹಿಳಾ ಕ್ರಿಕೆಟ್** ತಂಡದಲ್ಲಿ **ಮಲ್ಲೇಶ್ವರದ ಮಹಿಳಾ ತಂಡವು** ಪ್ರಥಮ ಸ್ಥಾನವನ್ನು **ಕೆಂಪೇಗೌಡ ನಗರದ ಮಹಿಳಾ ತಂಡ** ದ್ವಿತೀಯ ಸ್ಥಾನವನ್ನು ಪಡೆದುಕೊಂಡರು ಒಟ್ಟಾರೆ ಈ ಟೂರ್ನಮೆಂಟ್ ನಲ್ಲಿ ರಾಜ್ಯದ ನಾನಾ ಭಾಗಗಳಿಂದ ಸರಿಸುಮಾರು 500 ಆರ್ಯವೈಶ್ಯ ಕ್ರಿಕೆಟ್ ಆಟಗಾರರು ಭಾಗವಹಿಸಿ ಪಂದ್ಯಾವಳಿಗಳಿಗೆ ಶೋಭೆ ನೀಡಿದರು.

## ಕರ್ನಾಟಕ ಆರ್ಯವೈಶ್ಯ ನೌಕರರ ಕ್ಷೇಮಾಭಿವೃದ್ಧಿ ಸಂಘ (ರಿ.)

ನಂ 16, ಕ.ಆ.ಮಹಾಸಭಾ ಕಟ್ಟಡ, ಶೇಷಾದ್ರಿ ರಸ್ತೆ, ಗಾಂಧೀನಗರ, ಬೆಂಗಳೂರು Visit: www.kavnks.in

ಬಳ್ಳಾರಿ ವಿಭಾಗದ ಆರ್ಯವೈಶ್ಯ ಸರ್ಕಾರಿ ನೌಕರರ ಸಮ್ಮಿಲನ ಸಭೆಗೆ ಆಹ್ವಾನ **(Get together of Govt officials)** ಬಳ್ಳಾರಿ, ವಿಜಯನಗರ, ಕೊಪ್ಪಳ, ದಾವಣಗೆರೆ, ಚಿತ್ರದುರ್ಗ ಹಾಗೂ ಇತರೆ ಅಕ್ಕಪಕ್ಕದ ಜಿಲ್ಲೆಗಳಲ್ಲಿರುವ ಆರ್ಯವೈಶ್ಯ ಸಮಾಜದ ಸೇವೆಯಲ್ಲಿರುವ ಹಾಗೂ ನಿವೃತ್ತ ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರು ಬಳ್ಳಾರಿಯಲ್ಲಿ ನಡೆಯಲಿರುವ ಈ ಸಭೆಗೆ ತಪ್ಪದೇ ಆಗಮಿಸುವ ಮೂಲಕ ಸಂಘಟಿತರಾಗಿ, ನಮ್ಮ ಮತ್ತು ಸಮಾಜದ ಸರ್ವತೋಮುಖ ಪ್ರಗತಿಗಾಗಿ ಸಹಕರಿಸಲು ಕೋರಲಾಗಿದೆ.

(ನಿಮಗೆ ತಿಳಿದಿರುವ ಆರ್ಯವೈಶ್ಯ ಸಮಾಜದ ಸೇವೆಯಲ್ಲಿರುವ ಹಾಗೂ ನಿವೃತ್ತ ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರಿಗೆ ತಪ್ಪದೇ ಈ ಮಾಹಿತಿಯನ್ನು ತಿಳಿಸಿ ಸಹಕರಿಸಿ )



ಡಾ ಜೆ ವಿ ನಂದನ್ ಕುಮಾರ್
ಅಧ್ಯಕ್ಷರು



ಡಾ ಅಜಯ್ ಕುಮಾರ್ ಎಂ ವಿ
ಪ್ರಧಾನ ಕಾರ್ಯದರ್ಶಿ

ದಿನಾಂಕ: 29ನೇ ಮಾರ್ಚ್ 2026, ಭಾನುವಾರ ಸಮಯ: 10:00 ಗಂಟೆಗೆ
ಸ್ಥಳ: ಶ್ರೀಕನ್ಯಕಾಪರಮೇಶ್ವರಿ ದೇವಸ್ಥಾನ, SKPT ಸ್ಟ್ರೀಟ್, ಬೆಂಗಳೂರು ರಸ್ತೆ, ಬಳ್ಳಾರಿ

ಮಾಹಿತಿಗಾಗಿ ಸಂಪರ್ಕಿಸಿ: 6360828538, 9632147878, 9972420147, 9886359848

## ಯಶಸ್ವಿ MSME ಕಾರ್ಯಾಗಾರ



ಮಹಿಳೆಯರಲ್ಲಿ ಸ್ವಉದ್ಯೋಗ ಕ್ರಾಂತಿಯನ್ನು ಹುಟ್ಟು ಹಾಕಿ ಆರ್ಥಿಕ ಸ್ವಾಲಂಬಿಗಳಾಗಿ, ಉದ್ಯೋಗದಾತರನ್ನಾಗಿ ಮಾಡುವಂತಹ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವ **ಮಹಾಸಭೆಯ ಮಹಿಳಾ ಸಬಲೀಕರಣ ಘಟಕದಿಂದ** ದಿನಾಂಕ 24-2-2026ರಂದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಮಧ್ಯಮ ವರ್ಗದ ಉದ್ಯಮಗಳ ಆರಂಭಕ್ಕೆ ಸಿಗುವ ಸಲಹೆ, ಸಹಕಾರ, ಸಹಾಯ ಮಾರ್ಗದರ್ಶನಗಳ ಬಗ್ಗೆ **MSME** ಇಲಾಖೆಯ ಸಹಾಯಕ ನಿರ್ದೇಶಕರಾದ **ಶ್ರೀ ಶಿವಕುಮಾರ್** ಎ ರವರಿಂದ ಮಾರ್ಗದರ್ಶನವನ್ನು ನೀಡಲಾಯಿತು. ಮಹಾಸಭೆಯ ಆವರಣದಲ್ಲಿ ಸುಮಾರು 150 ನಿಮಿಷಗಳ ಕಾಲ ನಡೆದ ಈ ಕಾರ್ಯಾಗಾರಕ್ಕೆ ಸರಿಸುಮಾರು 50 ಮಹಿಳೆಯರು ಭಾಗವಹಿಸಿ ಅದರ ಉಪಯೋಗ ಪಡೆದುಕೊಂಡರು

ಮುದ್ರಕರು: ಗಿರೀಶ್ ಪ್ರಿಂಟರ್ಸ್, ನಂ.161/2, 1ನೇ ಮುಖ್ಯರಸ್ತೆ, ಶೇಷಾದ್ರಿಪುರಂ, ಬೆಂಗಳೂರು - 560 020 ಇ-ಮೇಲ್ : info@gireeshprinters.com website : www.gireeshprinters.com
ಸಂಪಾದಕರು ಮತ್ತು ಪ್ರಕಾಶಕರು: ರಾ ಪ ರವಿಶಂಕರ್ ಕರ್ನಾಟಕ ಆರ್ಯವೈಶ್ಯ ಮಹಾಸಭಾ ಪರವಾಗಿ, 16, ಶೇಷಾದ್ರಿರಸ್ತೆ, ಗಾಂಧಿನಗರ, ಬೆಂಗಳೂರು-09 ಫೋನ್: 22206151/22206152